

ಮಹತ್ವದ ಘಟ್ಟ ತಲುಪಿದಾಗ ಆವರೆಗೆ ನಡೆದುಬಂದ ಹಾದಿಯನ್ನು ಹಿಂತಿರುಗಿ ನೋಡುವುದು ಮನುಷ್ಯಸಹಜ ಸ್ವಭಾವ. ಅಂಥ ಅವಲೋಕನ, ಸವೆಸಿದ ದಾರಿಯಲ್ಲಿ ಎದುರಾದ ಸಿಹಿ ಕಹಿ ನೆನಪುಗಳ ಮರುಕಳಿಕೆಯ ಜೊತೆಗೆ, ಆ ಅನುಭವಗಳಿಂದ ನಾವು ಕಲಿತ ಅಥವಾ ಕಲಿಯಬೇಕಾದ ಪಾಠಗಳ ಸೂಚನೆಯೂ ಆಗಿರುತ್ತದೆ. ಈ ಹಿನ್ನೆಲೆಯಲ್ಲಿ 2021ನೇ ವರ್ಷದ ಪುಟ ತಿರುವಿದರೆ, ನಮ್ಮನ್ನು ಚಕಿತಗೊಳಿಸಿದ, ಕಂಗಾಲಾಗಿಸಿದ ಹಾಗೂ ಹೊಸ ಚೈತನ್ಯ ತುಂಬಿದ ಸಾಲು ಸಾಲು ವಿದ್ಯಮಾನಗಳು ಎದುರಾಗುತ್ತವೆ. ಅಂಥ 21 ವಿದ್ಯಮಾನಗಳ ವಿಶ್ಲೇಷಣೆ ‘ಸುಧಾ’ ವರ್ಷಾಂತ್ಯ ಸಂಚಿಕೆಯ ವಿಶೇಷ. ಪ್ರಾದೇಶಿಕ ವಿದ್ಯಮಾನಗಳೊಂದಿಗೆ ರಾಷ್ಟ್ರೀಯ-ಜಾಗತಿಕ ಘಟನೆಗಳೂ ಸಂಕಲನಗೊಂಡಿರುವ ಈ ವಿಶ್ಲೇಷಣೆ ಕಳೆದೊಂದು ವರ್ಷದ ಪ್ರಮುಖ ಘಟನಾವಳಿಗಳನ್ನು ನಮ್ಮ ಕಣ್ಣೆದುರು ತರುವ ಸಿನಿಮಾ ಟ್ರೇಲರ್‌ನಂತಿದೆ. ತುಸು ದೀರ್ಘವಾದ ಈ ಟ್ರೇಲರ್ ನೋಡಿದ ಮೇಲೆ, ಕಳೆದ ವರ್ಷದಲ್ಲಿ ನಾವು ಗಳಿಸಿದ್ದೇನು ಹಾಗೂ ಕಳೆದುಕೊಂಡಿದ್ದೇನು ಎನ್ನುವುದರ ನಿರ್ಣಯವನ್ನು ಓದುಗರೇ ಮಾಡಬಹುದು. ಈ ಅವಲೋಕನದಲ್ಲಿ, ಮುಂಬರುವ ದಿನಗಳನ್ನು ಎದುರುಗೊಳ್ಳಲು ಅಗತ್ಯವಾದ ಜೀವದ್ರವ್ಯದ ಬುತ್ತಿಯೇನಾದರೂ ದೊರೆಯಬಹುದೇ ಎನ್ನುವ ಪ್ರಶ್ನೆಯನ್ನೂ ನಾವು ಕೇಳಿಕೊಳ್ಳಬೇಕು.

ಪ್ರವೀಣ ಕುಲಕರ್ಣಿ | ಎನ್‌. ಉದಯಕುಮಾರ್ | ರಘುನಾಥ ಚ.ಹ. | ಪ್ರಮೋದ | ಜಯಸಿಂಹ ಆರ್. | ವಿಜಯ್ ಜೋಷಿ

# ಮತ್ತೊಮ್ಮೆ ಮುಖ್ಯಾಂಶಗಳು